**ಕರ್ನಾಟಕ ಸರ್ಕಾರ**

**(ಸಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ**<br>**(ಆರ್.ಪಿ.ಸಂಖ್ಯೆ 57)**<br>**ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ,**

**ಹಾಸನ**

**ಸ್ಪೆಷಲ್ ಕೇಸ್ ನಂಬರ್ :: 103/2015**

ಪ್ರಾಸಾ- 1 ಚಾಸಾ- 1

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ಶಾಂತಿನಾಥ ಜೆ ವಣ್ಣೂರು |
| ತಂದೆಯ ಹೆಸರುಃ | ಃ | ಜಿನ್ನಪ್ಪ |
| ವಯಸ್ಸುಃ | ಃ | 45 ವರ್ಷ |
| ಉದ್ಯೋಗಃ | ಃ | ಪೊಲೀಸ್ ಇನ್ಸೆಕ್ಟರ್,<br>ಪೊಲೀಸ್ ತರಬೇತಿ ಶಾಲೆ, ಶಾಂತಿಗ್ರಾಮ ಹಾಸನ |
| ವಾಸಃ | ಃ | ಚನ್ನರಾಯಪಟ್ಟಣ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 12-07-2024**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಸೆಪ್ಟೆಂಬರ್ 2012 ರಿಂದ ಅಕ್ಟೋಬರ್ 2015 ರವರೆಗೆ ಹಾಸನ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಇನ್ಸೆಕ್ಟರ್ ಆಗಿ ಕೆಲಸ ಮಾಡಿದ್ದೇನೆ.

2.ಜಿ.ಪಿ.ಆನಂದ್, ಸಹಾಯಕ ಇಂಜಿನಿಯರ್, ಪಟ್ಟಣ ಪಂಚಾಯತ್, ಆಲೂರು ರವರು ಹಾಲಿ ನಗರಸಭೆ ಹಾಸನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಅವರು ಅವರ ನಿಗಧಿತ ಆದಾಯಕ್ಕಿಂತ ಹೆಚ್ಚುವರಿಯಾಗಿ ಚರ ಮತ್ತು ಸ್ಥಿರ ಆಸ್ತಿಯನ್ನು ಹೊಂದಿರುತ್ತಾರೆ ಎಂಬುದಾಗಿ ಬಂದ ಮಾಹಿತಿಯ ಮೇರೆಗೆ ಸಿಬ್ಬಂದಿಯವರನ್ನು ನಿಯೋಜಿಸಿ, ಗುಪ್ತವಾಗಿ ಮಾಹಿತಿಯನ್ನು ಸಂಗ್ರಹಿಸಲಾಗಿ ಅವರು ನಿಗಧಿತ ಆದಾಯಕ್ಕಿಂತ ಹೆಚ್ಚುವರಿ ಆಸ್ತಿ ಹೊಂದಿದ್ದು ಕಂಡುಬಂದಿದ್ದು, ಮಾಹಿತಿ ಈ ರೀತಿಯಾಗಿ ಇರುತ್ತದೆ.

3. ಅವರ ಕೌಟುಂಬಿಕ ಹಿನ್ನೆಲೆಃ

(1) ಸದರಿ ಆರೋಪಿತರು ಹಾಸನ ಜಿಲ್ಲೆ, ಆಲೂರು ತಾಲ್ಲೂಕು, ಕುಂದೂರು ಹೋಬಳಿಯ, ಗಂಜಿಗೆರೆ ಗ್ರಾಮದ ಪುಟ್ಟಸ್ವಾಮಿಗೌಡ ರವರ ಮಗನಾಗಿದ್ದು, ಸದರಿಯವರ ತಂದೆ-ತಾಯಿಗೆ 4 ಜನ ಮಕ್ಕಳಲ್ಲಿ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣುಮಕ್ಕಳಿದ್ದು, ಆರೋಪಿತರು 1 ನೇ ಮಗನಾಗಿದ್ದು, 2 ನೇ ಮಗ ರವಿ, 3 ಮಗಳು ಮಮತಾ, 4 ನೇಯವಳು ಲಲಿತಮ್ಮ ಆಗಿರುತ್ತಾರೆ. 2 ನೇ ಮಗ ರವಿ ಖಾಸಗಿ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. 3 ನೇ ಮಗಳು ಮಮತಾ ಗಂಜಿಕೆರೆ ಅಂಗನವಾಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ, 4 ನೇ ಮಗಳು ಲಲಿತಮ್ಮ ಆಲೂರು ಪಟ್ಟಣ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

(2) ಆರೋಪಿತರ ವೈಯಕ್ತಿಕ ವಿವರಃ ಆರೋಪಿತರು 1999 ರಿಂದ ಎಸ್.ಜೆ.ಎಸ್.ಆರ್.ವೈ ಯೋಜನೆಯಡಿ ತಾತ್ಕಾಲಿಕವಾಗಿ ಮಾಸಿಕ ಮೊತ್ತದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು, 28.10.2005 ರಿಂದ ಸದರಿಯವರು ಕಿರಿಯ ಅಭಿಯಂತರರಾಗಿ ಆಲೂರು ಪಟ್ಟಣ ಪಂಚಾಯಿತಿಗೆ ನಿಯೋಜಿತರಾಗಿರುತ್ತಾರೆ. 28.10.2005 ರಿಂದ ಇವರ ವೇತನ ಶ್ರೇಣಿ 6000 ದಿಂದ 11200 ರಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ನಾನು ಮಾಹಿತಿ ಕೊಡುವ ಸಂದರ್ಭದಲ್ಲಿ ಹಾಸನ ನಗರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಹೆಚ್.ಜೆ.ಶುಭ ಎಂಬುವವರನ್ನು ವಿವಾಹವಾಗಿದ್ದು 5 ಮತ್ತು 6 ನೇ ತರಗತಿಯಲ್ಲಿ ಓದುತ್ತಿದ್ದ ಇಬ್ಬರು ಮಕ್ಕಳಿರುತ್ತಾರೆ. ಇವರ ಚೆಕ್ ಅವಧಿಯನ್ನು 1999 ರಿಂದ 2013 ರವರೆಗೆ ಪರಿಗಣಿಸಲಾಗಿದೆ.

4. ಆರೋಪಿತರು ಹೊಂದಿರುವ ಚರ ಮತ್ತು ಸ್ಥಿರಾಸ್ತಿಗಳ ವಿವರಃ

ಎ) ಹಾಸನ ನಗರದ ಕುವೆಂಪುನಗರದಲ್ಲಿ ತಂದೆ ಪುಟ್ಟಸ್ವಾಮಿಯವರ ಹೆಸರಿನಲ್ಲಿರುವ ಎಲ್.ಐ.ಜಿ. 2,35 ಸಿ ಮನೆ, ಇದು ಪಿತ್ರಾರ್ಜಿತವಾಗಿದ್ದು

ಬಿ) ಹೆಚ್.ಜೆ.ಶುಭರವರ ಹೆಸರಿನಲ್ಲಿ 2009 ನೇ ಸಾಲಿನಲ್ಲಿ ಹಾಸನದ ಉದಯಗಿರಿ ಬಡಾವಣೆಯಲ್ಲಿ ನಂ.453 ರಲ್ಲಿರುವ ನಿವೇಶನ, ವಿಸ್ತೀರ್ಣ 65 ಇಂಟು 40 ಇದರ ಮೌಲ್ಯ 6,73,910.

ಸಿ) ಸದರಿ ನಿವೇಶನದಲ್ಲಿ ನಿರ್ಮಿಸಿರುವ ಮನೆ ಸುಮಾರು 40 ಲಕ್ಷ.

ಡಿ) ಆರೋಪಿತರು ಬೇನಾಮಿ ಹೆಸರಿನಲ್ಲಿ ಹೊಂದಿರುವ ಸ್ವಿಫ್ಟ್ ಕಾರು ಕೆಎ.02.ಎಂ.ಇ.4662 ಆರು ಲಕ್ಷ ಮೌಲ್ಯ.

ಇ) ಮನೆಯಲ್ಲಿರುವ ಪೀಠೋಪಕರಣಗಳು ಹಾಗೂ ಚಿನ್ನಾಭರಣಗಳ ಅಂದಾಜು ಮೌಲ್ಯ

3 ಲಕ್ಷ.

ಹೀಗೆ ಒಟ್ಟು ಬೆಲೆ 55,73,910/-.

ಎಫ್) ಮದುವೆ, ಕುಟುಂಬ ನಿರ್ವಹಣೆ, ಮಕ್ಕಳ ವಿದ್ಯಾಭ್ಯಾಸ ಸೇರಿ ಅಂದಾಜು 10 ಲಕ್ಷ ರೂಪಾಯಿಗಳು.

5. ಅಂದಾಜು ಆದಾಯದ ವಿವರಃ

ಎ) ತಾತ್ಕಾಲಿಕ ಸೇವಾ ಅವಧಿಯಲ್ಲಿ 1995 ರಿಂದ 2005 ರವರೆಗೆ 6 ಲಕ್ಷ,

ಬಿ) 2005 ರಿಂದ 2013 ರವರೆಗೆ ಅವರ ವೇತನ 14 ಲಕ್ಷ.

ಸಿ) ಪಿತ್ರಾರ್ಜಿತ ಜಮೀನಿನಿಂದ ಬಂದ ಆದಾಯ 6 ಲಕ್ಷ.

ಡಿ) ಮನೆಯ ಬಾಡಿಗೆ ಮತ್ತು ಬೋಗ್ಯ, ಇತ್ಯಾದಿಗಳಿಂದ ಬಂದ ಆದಾಯ 8 ಲಕ್ಷ.

ಇ) ಅಂದಾಜು ಸಾಲ 5 ಲಕ್ಷ.

ಹೀಗೆ ಒಟ್ಟು 39 ಲಕ್ಷ ರೂಪಾಯಿಗಳು.

6.ಚರ ಮತ್ತು ಸ್ಥಿರಾಸ್ತಿಯ ಒಟ್ಟು ಮೌಲ್ಯ 55,73,910/-,

ಅವರ ಮದುವೆ ಕುಟುಂಬದ ಖರ್ಚು ವೆಚ್ಚ 10,00,000/- {ಅವರ ಹೊಂದಿದ್ದ ಒಟ್ಟು ಆಸ್ತಿಯ ಮೌಲ್ಯ 65,73,910/-ರೂಪಾಯಿಗಳು}. ವೇತನ ಸೇರಿದಂತೆ ಇತರ ಆದಾಯ 39,00,000/- ರೂಪಾಯಿಗಳು. ಅವರು ಹೊಂದಿದ್ದ ಒಟ್ಟು ಆಸ್ತಿಯಮೌಲ್ಯದಿಂದ ಅವರ ಆದಾಯದ ಮೂಲ 39 ಲಕ್ಷವನ್ನು ಕಡಿತಗೊಳಿಸಿದಾಗ ಅಕ್ರಮವಾಗಿ ಗಳಿಸಿರುವ ಆದಾಯ ಅಂದಾಜು 26,73,910/-ರೂಪಾಯಿಗಳು ಎಂದು ಕಂಡುಬಂತು. ಇದನ್ನು ಶೇಕಡಾವಾರು ಮಾಡಿದಾಗ ಪ್ರತಿಶತ 68.56 ಬಂದಿರುತ್ತದೆ.

7. ಸದರಿ ಆರೋಪಿತರು ಆ ಸಂದರ್ಭದಲ್ಲಿ ಉದಯಗಿರಿ ಬಡಾವಣೆಯ ಮನೆ ಸಂಖ್ಯೆ 453 ರಲ್ಲಿ ವಾಸವಿದ್ದು ದಿನನಿತ್ಯದ ಬಳಕೆಗೆ ಕೆಎ.02.ಎಂಇ.4667 ಕಾರನ್ನು ಬಳಸುತ್ತಿದ್ದು ಕಂಡುಬಂದಿರುತ್ತದೆ. ಅವರ ಪಿತ್ರಾರ್ಜಿತ ಆಸ್ತಿ ಗಂಜಿಕೆರೆ ಗ್ರಾಮದಲ್ಲಿ ಮನೆಯಲ್ಲಿ ಆರೋಪಿತರ ತಾಯಿ ಮುತ್ತಮ್ಮ, ತಂಗಿ ಮಮತಾ, ತಂಗಿಯ ಗಂಡ ಸೋಮೇಗೌಡರು ವಾಸವಿರುವುದಾಗಿ ತಿಳಿದುಬಂದಿರುತ್ತದೆ.

8. ಆರೋಪಿತರು ಶೇಕಡ 68 ರಷ್ಟು ಅಕ್ರಮ ಆಸ್ತಿ ಹೊಂದಿರುವುದು ಗುಪ್ತ ಮಾಹಿತಿ

ಸಂಗ್ರಹಣಾ ಕಾಲದಲ್ಲಿ ತಿಳಿದುಬಂದಿದ್ದರಿಂದ ಇವರ ವಿರುದ್ಧ ಕಲಂ 13(1) (ಇ) ರೆ:ವಿ 13(2) ಪಿ.ಸಿ.ಕಾಯಿದೆಯಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಮಾಡಲು ಅನುಮತಿ ನೀಡಬೇಕೆಂದು ಕೋರಿ ಮುಂದಿನ ಆದೇಶಕ್ಕಾಗಿ ಎಸ್.ಪಿ. ಲೋಕಾಯುಕ್ತ, ಹಾಸನ ರವರಿಗೆ ದಿನಾಂಕ 24.07.2013 ರಂದು ಸೋರ್ಸ್ ವರದಿಯನ್ನು ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸೋರ್ಸ್ ವರದಿಯನ್ನು ನಿಶಾನೆ ಪಿ.1 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.1(ಎ) ಎಂದು ಗುರುತಿಸಲಾಯಿತು. ನಿಶಾನೆ ಪಿ.1 ನ್ನು ಪಡೆದುಕೊಂಡು ಎಸ್.ಪಿ. ಲೋಕಾಯುಕ್ತ ರವರು ನನ್ನ ಜೊತೆ ಕೆಲಸ ಮಾಡುತ್ತಿದ್ದ ನರಸಿಂಹಮೂರ್ತಿರವರಿಗೆ ಪ್ರಕರಣವನ್ನು ದಾಖಲಿಸಿ ತನಿಖೆ ಮಾಡಲು ಆದೇಶ ಮಾಡಿರುತ್ತಾರೆ.

9. ನಂತರ ದಿನಾಂಕ 25.07.2013 ರಂದು ಪೊಲೀಸ್ ಇನ್ಸ್ಪೆಕ್ಟರ್ ನರಸಿಂಹಮೂರ್ತಿರವರು ಆರೋಪಿತರ ಮನೆ, ಕಛೇರಿ, ತಾಯಿ ವಾಸ ಮಾಡುತ್ತಿದ್ದ ಮನೆಯನ್ನು ಶೋಧನೆ ಮಾಡಲು ವಾರೆಂಟನ್ನು ಪಡೆದುಕೊಂಡಿದ್ದೇನೆ, ಕೊಟ್ಟ ವಾರೆಂಟನ್ನು ಸಂಬಂಧಪಟ್ಟವರಿಗೆ ಜಾರಿ ಮಾಡಿ ಸಂಬಂಧಪಟ್ಟ ಸ್ಥಳದಲ್ಲಿ ಶೋಧನೆ ಮಾಡಿ, ಆರೋಪಿತರಿಗೆ ಸಂಬಂಧಪಟ್ಟ ಬಂಗಾರ, ಬೆಲೆಬಾಳುವ ವಸ್ತುಗಳು, ದಾಖಲೆಗಳು ಸಿಕ್ಕಲ್ಲಿ, ಮಹಜರ್ ಜರುಗಿಸಿ ವಶಪಡಿಸಿಕೊಂಡು ಪಿ.ಐ.ರವರಿಗೆ ಹಿಂದಿರುಗಿಸಲು ಸೂಚಿಸಿದರು. ಸದರಿ ಲೆಟರ್ ನ್ನು ನೋಡಿ ಗುರ್ತಿಸಿದ್ದು, ದಾಖಲೆಯನ್ನು ನಿಶಾನೆ ಪಿ.2 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.2(ಎ) ಎಂದು ಗುರುತಿಸಲಾಯಿತು. ನಂತರ ಪಂಚರಾದ ಕೃಷ್ಣಮೂರ್ತಿ ಹಾಗೂ ಕುಮಾರಿ ಶ್ವೇತಾರವರನ್ನು ನನಗೆ ಪರಿಚಯಿಸಿ ಪಂಚರಾಗಿರಲು ಸೂಚಿಸಿದರು. ದಿನಾಂಕ 26.07.2013 ರಂದು ತನಿಖಾಧಿಕಾರಿಯವರು ಬೆಳಿಗ್ಗೆ 5.00 ಗಂಟೆಗೆ ಲೋಕಾಯುಕ್ತ ಕಛೇರಿಯಲ್ಲಿ ಹಾಜರಿರುವಂತೆ ಸೂಚಿಸಿದರು.

10.ದಿನಾಂಕ 26.07.2013 ರಂದು ತನಿಖಾಧಿಕಾರಿಯವರ ಸೂಚನೆಯಂತೆ ನಾನು ಆರೋಪಿತರ ತಾಯಿ ವಾಸವಾಗಿರುವ ಮನೆ ಹಾಗೂ ಹಾಸನ ನಗರಸಭೆಯಲ್ಲಿರುವ ಅವರ ಕಛೇರಿಯನ್ನು ಶೋಧನೆ ಮಾಡಲು ಪಂಚರಾದ ಕೃಷ್ಣಮೂರ್ತಿ ಮತ್ತು ಶ್ವೇತಾ ಹಾಗೂ ಸಿಬ್ಬಂದಿಗಳಾದ ರಾಮಕೃಷ್ಣ, ಚೆಲುವೇಗೌಡ ಮತ್ತು ಚಾಲಕ ಸೋಮಶೇಖರ್ ರವರನ್ನು ಕರೆದುಕೊಂಡು ಬೆಳಿಗ್ಗೆ 5-30 ಗಂಟೆಗೆ ಇಲಾಖಾ ವಾಹನದಲ್ಲಿ ಲೋಕಾಯುಕ್ತ ಕಛೇರಿಯಿಂದ ಹೊರಟು ಗಂಜಿಗೆರೆಯಲ್ಲಿ ಆರೋಪಿತರ ತಾಯಿ ವಾಸವಿದ್ದ ಮನೆ ಹತ್ತಿರ ತಲುಪುವಾಗ ಬೆಳಿಗ್ಗೆ 6.30 ಗಂಟೆ ಆಗಿತ್ತು. ನಂತರ ಅವರ ಮನೆಯ ಬಾಗಿಲನ್ನು ತೆರೆಸಿದಾಗ ಒಬ್ಬ ವ್ಯಕ್ತಿ ಹೊರಗೆ

ಬಂದಿದ್ದು ನಮ್ಮ ಪರಿಚಯ ಮಾಡಿ ಅವರ ಪರಿಚಯ ಕೇಳಲಾಗಿ, ಸೋಮೇಗೌಡ, ತಂದೆ ಲೇಟ್ ಕೃಷ್ಣೇಗೌಡ, ಸಹಶಿಕ್ಷಕರು, ಪ್ರಾಥಮಿಕ ಶಾಲೆ, ಮಲ್ಲಿಪಟ್ಟಣ ಎಂದು ತಿಳಿಸಿದರು. ನಂತರ ಅವರಿಗೆ ಪ್ರಕರಣದ ವಿಷಯವನ್ನು ತಿಳಿಸಿ, ಅವರ ಭಾವ ಜೆ.ಪಿ.ಆನಂದ್ ರವರು ಅಕ್ರಮ ಆಸ್ತಿ ಹೊಂದಿರುವ ಬಗ್ಗೆ ಶೋಧನೆ ಮಾಡಲು ಬಂದಿರುವುದಾಗಿ ತಿಳಿಸಿ, ಅವರಿಗೆ ಘನ ನ್ಯಾಯಾಲಯದ ಶೋಧನಾ ವಾರೆಂಟನ್ನು ಜಾರಿಗೊಳಿಸಿ, ತನಿಖೆಗೆ ಸಹಕರಿಸಲು ಕೋರಿಕೊಂಡಾಗ ಒಪ್ಪಿದರು. ವಾರೆಂಟಿಗೆ ಅವರ ಸಹಿಯನ್ನು ಹಾಗೂ ಪಂಚರ ಸಹಿಯನ್ನು ಪಡೆದು, ಅವರ ಸಮಕ್ಷಮ ಪಂಚರು ಮತ್ತು ನಾವು ಸ್ವಯಂ ಶೋಧನೆ ಮಾಡಿಕೊಂಡು ಸೋಮೇಗೌಡ ರವರ ಪತ್ನಿ ಮಮತಾ ಹಾಗೂ ಅವರ ಅತ್ತೆ ಮುತ್ತಮ್ಮರವರ ಸಮಕ್ಷಮ ಶೋಧನಾ ಕಾರ್ಯ ಕೈಗೊಂಡಿರುತ್ತೇವೆ. ಸದರಿ ಶೋಧನಾ ವಾರೆಂಟ್ ಗೆ ನಾನು ಸಹಿ ಮಾಡಿದ್ದೇನೆ. ಶೋಧನಾ ವಾರೆಂಟನ್ನು ನಿಶಾನೆ ಪಿ.3 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.3(ಎ) ಎಂದು ಗುರುತಿಸಲಾಯಿತು.

11.ಶೋಧನಾ ಸಂದರ್ಭದಲ್ಲಿ ಸದರಿ ಮನೆಯ ಹಾಲ್ ನಲ್ಲಿ ಸೀರೆಗಳು, ಚಿನ್ನಾಭರಣಗಳು ಸೇರಿ ಒಟ್ಟು ಬೆಲೆ 87,000/- ರೂ ಮೌಲ್ಯ ಇದ್ದು, ಸದರಿ ಚಿನ್ನಾಭರಣಗಳನ್ನು ಆರೋಪಿತರ ತಂಗಿ ಮಮತಾರವರ ವಶಕ್ಕೆ ನೀಡಲಾಗಿರುತ್ತದೆ ಹಾಗೂ ಮಮತಾ ಮತ್ತು ಮುತ್ತಮ್ಮ ರವರ ಮೈಮೇಲೆ ಇದ್ದಂತಹ ಒಡವೆಗಳನ್ನು ಅವರ ಮೈಮೇಲೆಯೇ ಬಿಡಲಾಗಿದೆ. ಅದೇ ರೀತಿ ದನದ ಕೊಟ್ಟಿಗೆಯಲ್ಲಿ 3 ಎಮ್ಮೆಗಳು ಅಂದಾಜು ಮೌಲ್ಯ 30,000/-, 4 ಎಮ್ಮೆ ಕರುಗಳು ಅಂದಾಜು ಮೌಲ್ಯ 20,000/-, ಹೀಗೆ ಒಟ್ಟು ಮೌಲ್ಯ ರೂ.50,000/-. ಹಾಗೆ ಮನೆಗೆ ಹೊಂದಿಕೊಂಡಂತೆ ಪಶ್ಚಿಮ ದಿಕ್ಕಿನ ಕೊಟ್ಟಿಗೆಯಲ್ಲಿ 4 ಸಿಂಧಿ ಹಸುಗಳು, ಒಂದು ಕರು ಇದ್ದು,ಅವುಗಳ ಅಂದಾಜು ಮೌಲ್ಯ 52,000/- ಆಗಿರುತ್ತದೆ. ಸದರಿ ಜಾನುವಾರುಗಳನ್ನು ಆರೋಪಿತರ ತಾಯಿ ಮುತ್ತಮ್ಮ ಮತ್ತು ಮಮತಾರವರು ನೋಡಿಕೊಳ್ಳುತ್ತಿರುವುದಾಗಿ ತಿಳಿಸಿರುತ್ತಾರೆ. ಸದರಿ ಮನೆ ಸಿಮೆಂಟ್ ನೆಲವಾಗಿದ್ದು ಮಣ್ಣಿನ ಗೋಡೆಯ ಮನೆಯಾಗಿರುತ್ತದೆ. ಸದರಿ ಪಂಚನಾಮೆ ಕಾಲದಲ್ಲಿ ಯಾವುದೇ ವಸ್ತುವನ್ನು ವಶಕ್ಕೆ ತೆಗೆದುಕೊಂಡಿರುವುದಿಲ್ಲ. ಸದರಿ ಪಂಚನಾಮೆಯನ್ನು ಆರೋಪಿತರ ತಾಯಿಯ ವಾಸದ ಮನೆ ಗಂಜಿಗೆರೆಯಲ್ಲಿ ಬೆಳಿಗ್ಗೆ 7.00 ರಿಂದ 9.00 ಗಂಟೆಯವರೆಗೆ ಮಾಡಲಾಯಿತು. ಪಂಚನಾಮೆಯನ್ನು ಓದಿ ಹೇಳಿ ಪಂಚರು ಹಾಗೂ ಅಲ್ಲಿದ್ದವರ ಸಹಿ ಪಡೆಯಲಾಯಿತು. ಪಂಚನಾಮೆಯನ್ನು ನಿಶಾನೆ ಪಿ.4 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.4(ಎ) ಎಂದು ಗುರುತಿಸಲಾಗಿದೆ.

12.ಅದೇ ದಿನ ಹಿಂದಿರುಗಿ, ತನಿಖಾಧಿಕಾರಿಯವರು ಆರೋಪಿತರ ಮನೆಯ ಶೋಧನಾ

ಕಾರ್ಯದಲ್ಲಿ ತೊಡಗಿದ್ದಲ್ಲಿಗೆ ಹೋಗಿ, ಮೂಲ ಪಂಚನಾಮೆ ಮತ್ತು ವಾರೆಂಟನ್ನು ಅವರಿಗೆ ನೀಡಿದೆವು. ನಂತರ ತನಿಖಾಧಿಕಾರಿಯವರು ನನಗೆ, ಜಯರಾಮ್, ತಂದೆ ಲೇಟ್ ಹೊಂಗಯ್ಯ, ಕುವೆಂಪುನಗರದಲ್ಲಿರುವ ಅವರ ಮನೆಯನ್ನು ಶೋಧನೆ ಮಾಡಿ, ಮಹಜರ್ ಕ್ರಮ ಜರುಗಿಸಿ ಪಂಚನಾಮೆ ಸಹಿತ ಹಿಂದಿರುಗಿಸಬೇಕೆಂದು ಸೂಚಿಸಿ ಸಿ.ಆರ್.ಪಿ.ಸಿ. 165 ರ ಪ್ರಕಾರ ಅಧಿಕಾರ ನೀಡಿದರು. ಸದರಿ ಅಧಿಕಾರ ಪತ್ರವನ್ನು ನಿಶಾನೆ ಪಿ.5 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.5(ಎ) ಎಂದು ಗುರುತಿಸಲಾಗಿದೆ.

13.ನಾನು ಪಂಚರಾದ ಕೃಷ್ಣಮೂರ್ತಿ ಹಾಗೂ ಶ್ವೇತಾ ಮತ್ತು ಸಿಬ್ಬಂದಿಗಳೊಂದಿಗೆ ಜಯರಾಮ್ ಬಿನ್ ಲೇಟ್ ಹೊಂಗಯ್ಯರವರ ಕುವೆಂಪುನಗರದಲ್ಲಿರುವ ವಾಸದ ಮನೆಗೆ ಇಲಾಖಾ ವಾಹನದಲ್ಲಿ ಮಧ್ಯಾಹ್ನ 1.00 ಗಂಟೆಗೆ ಹೊರಟು 1.10 ಗಂಟೆಗೆ ತಲುಪಿರುತ್ತೇವೆ. ನಂತರ ಜಯರಾಮ್ ಬಿನ್ ಹೊಂಗಯ್ಯರವರಿಗೆ ನನ್ನ ಮತ್ತು ಪಂಚರ ಪರಿಚಯ ಮಾಡಿಕೊಟ್ಟು ಪ್ರಕರಣದ ವಿಷಯವನ್ನು ತಿಳಿಸಿ, ಅವರಿಗೆ ತನಿಖೆಗೆ ಸಹಕರಿಸುವಂತೆ ಕೋರಿದಾಗ ಒಪ್ಪಿಕೊಂಡರು. ನಾವು ಅವರ ಸಮಕ್ಷಮ ಅಂಗಶೋಧನೆ ಮಾಡಿಕೊಂಡೆವು. ಸದರಿಯವರ ಮನೆಯನ್ನು ಹಂತಹಂತವಾಗಿ ಶೋಧನೆ ಮಾಡಲಾಗಿ,

1) ಅವರ ಬೆಡ್ ರೂಂ ನ ಸೂಟಿಕೇಸಿನಲ್ಲಿ ಆರೋಪಿತರ ಹೆಂಡತಿ ಹೆಚ್.ಜೆ.ಶುಭಾ ಮತ್ತು ಅವರ ಮಗ ಜಿ.ಎ.ಪ್ರಮುಖ್ ರವರಿಗೆ ಸಂಬಂಧಿಸಿದ 4 ದಾಖಲೆಗಳು ದೊರೆತಿದ್ದು,

ಎ) ಒಂದು ಗುರು ಟೀಕ್ ಇನ್ವೆಸ್ಟ್ ಮೆಂಟ್ ಗೆ ಸಂಬಂಧಿಸಿದ ಬಾಂಡ್ ಮೌಲ್ಯ 3000/-, ಸದರಿ ಬಾಂಡನ್ನು ನಿಶಾನೆ ಪಿ.6 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.6(ಎ) ಎಂದು ಗುರುತಿಸಲಾಯಿತು.

ಬಿ) ಒಂದು ಯುಟಿ.ಐ. ಮ್ಯೂಚುವಲ್ ಫಂಡ್ ಗೆ ಸಂಬಂಧಿಸಿದ ಬಾಂಡ್ ಮೌಲ್ಯ 1000/-, ಸದರಿ ಬಾಂಡನ್ನು ನಿಶಾನೆ ಪಿ.7 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.7(ಎ) ಎಂದು ಗುರುತಿಸಲಾಯಿತು.

ಸಿ) ಒಂದು ಯುಟಿ.ಐ. ಮ್ಯೂಚುವಲ್ ಫಂಡ್ ಗೆ ಸಂಬಂಧಿಸಿದ ಬಾಂಡ್ ಮೌಲ್ಯ 3000/-, ಸದರಿ ಬಾಂಡನ್ನು ನಿಶಾನೆ ಪಿ.8 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.8(ಎ) ಎಂದು ಗುರುತಿಸಲಾಯಿತು.

ಡಿ) ಇನ್ನೊಂದು ಯು.ಟಿ.ಐ. ಮ್ಯೂಚುವಲ್ ಫಂಡ್ ಗೆ ಸಂಬಂಧಿಸಿದ ಬಾಂಡ್ ಮೌಲ್ಯ 10,000/-, ಸದರಿ ಬಾಂಡನ್ನು ನಿಶಾನೆ ಪಿ.9 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ

ಪಿ.9(ಎ) ಎಂದು ಗುರುತಿಸಲಾಯಿತು.

ನಂತರ ಸದರಿ ದಾಖಲೆಗಳು ಆರೋಪಿತರಿಗೆ ಸಂಬಂಧಪಟ್ಟಿದ್ದರಿಂದ ವಶಕ್ಕೆ ಪಡೆಯಲಾಯಿತು. ಸದರಿ ಪಂಚನಾಮೆಯನ್ನು ಆರೋಪಿತರ ಮಾವ ಜಯರಾಮ್ ರವರ ವಾಸದ ಮನೆ ಇಡಬ್ಲ್ಯೂಎಸ್ 357 ಕುವೆಂಪುನಗರ, ಹಾಸನದಲ್ಲಿ ಮಧ್ಯಾಹ್ನ 1.30 ರಿಂದ ಮಧ್ಯಾಹ್ನ 3.30 ರವರೆಗೆ ಜರುಗಿಸಲಾಯಿತು. ಸದರಿ ಮಹಜರನ್ನು ನಿಶಾನೆ ಪಿ.10 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.10(ಎ) ಎಂದು ಗುರುತಿಲಾಗಿದೆ.

2) ಸದರಿ ಪಂಚನಾಮೆ ಕ್ರಮ ಜರುಗಿಸಿದ ನಂತರ ಪೊಲೀಸ್ ಇನ್ಸ್ಪೆಕ್ಟರ್ ರವರ ಬಳಿ ವರದಿ ಮಾಡಿಕೊಂಡೆವು. ಪಿ.ಐ.ರವರು ಆರೋಪಿತರ ಕಛೇರಿಯನ್ನು ಶೋಧನೆ ಮಾಡಲು ಸಂಜೆ 4.15 ಗಂಟೆಗೆ ನಮ್ಮ ಜೊತೆ ಆರೋಪಿ ಜೆ.ಪಿ.ಆನಂದ್‌ರವರನ್ನು ಕಳುಹಿಸಿಕೊಟ್ಟಿದ್ದು, ನಾನು, ಸಿಬ್ಬಂದಿ ಹಾಗೂ ಪಂಚರು ಅವರನ್ನು ಕರೆದುಕೊಂಡು ಅವರ ಕಛೇರಿಗೆ ಹೋಗಿದ್ದು, ಕಛೇರಿಯ ಶೋಧನಾ ವಾರೆಂಟನ್ನು ಅವರಿಗೆ ಜಾರಿಗೊಳಿಸಿ, ಆರೋಪಿತರು ಕುಳಿತುಕೊಳ್ಳುವ ಟೇಬಲ್ ಹಾಗೂ ಡ್ರಾ ಪರಿಶೀಲಿಸಲಾಗಿ ಯಾವುದೇ ದಾಖಲಾತಿಗಳು ದೊರೆತಿರುವುದಿಲ್ಲ. ಸದರಿ ಶೋಧನಾ ಪಂಚನಾಮೆಯನ್ನು ಆರೋಪಿತರ ಕಛೇರಿಯಲ್ಲಿ ಸಂಜೆ 4-45 ರಿಂದ ಸಂಜೆ 5-15 ರವರೆಗೆ ಮಾಡಿ ಮುಗಿಸಲಾಯಿತು. ಸದರಿ ಪಂಚನಾಮೆಯನ್ನು ಓದಿ ಹೇಳಿ ನಾನು ಹಾಗೂ ಪಂಚರು ಸಹಿ ಮಾಡಿದ್ದೇವೆ. ಈಗ ಶೋಧನಾ ವಾರೆಂಟನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಶಾನೆ ಪಿ.11 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.11(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ನಿಶಾನೆ ಪಿ.12 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.12(ಎ) ಎಂದು ಗುರುತಿಸಲಾಗಿದೆ. ಪಂಚನಾಮೆ ಹಾಗೂ ಶೋಧನಾ ವಾರೆಂಟನ್ನು ತನಿಖಾಧಿಕಾರಿಯವರಿಗೆ ವಾಪಸ್ ನೀಡಿರುತ್ತೇನೆ. ಹಾಸನ ನಗರಸಭೆ ಕಛೇರಿಯಲ್ಲಿ ಮಾಡಿದ ಪಂಚನಾಮೆಗೆ ಸಂಬಂಧಪಟ್ಟ ಶೋಧನಾ ವಾರೆಂಟನ್ನು ನಿಶಾನೆ ಪಿ.13 ಎಂದು ನನ್ನ ಸಹಿಯನ್ನು ನಿಶಾನೆ ಪಿ.13(ಎ) ಎಂದು ಗುರುತಿಸಲಾಯಿತು. ಜಯರಾಮ್ ರವರ ಮನೆಯಲ್ಲಿ ಮಾಡಿದ ಪಂಚನಾಮೆಗೆ ಸಂಬಂಧಪಟ್ಟ ಶೋಧನಾ ವಾರೆಂಟನ್ನು ನಿಶಾನೆ ಪಿ.14 ಎಂದು ನನ್ನ ಸಹಿಯನ್ನು ನಿಶಾನೆ ಪಿ.14(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ಡಿ.ಎಂ.ಪಿ. ವಕೀಲರಿಂದಃ-</u>**

ನಿಶಾನೆ ಪಿ.1 ಸೋರ್ಸ್ ರಿಪೋರ್ಟನ್ನು ಯಾವ ಸಮಯದಿಂದ ಯಾವ ಸಮಯದವರೆಗೆ ತಯಾರಿಸಿದ್ದೇನೆ ಎನ್ನುವುದನ್ನು ಬರೆದಿಲ್ಲ ಎನ್ನುವುದು ನಿಜ. ಎಸ್.ಪಿ.ಯವರಿಗೆ ಸೋರ್ಸ್

ವರದಿಯನ್ನು ಸಲ್ಲಿಸುವಾಗ ದಾಖಲಾತಿಗಳನ್ನುಸಲ್ಲಿಸಿಲ್ಲ. ಮನೆ ನಿರ್ಮಾಣದ ವೆಚ್ಚ ತೀರ್ಮಾನಿಸುವುದಕ್ಕೆ ಪೂರ್ವದಲ್ಲಿ ಎಷ್ಟು ವೆಚ್ಚವಾಗಬಹುದು ಎಂಬ ಕುರಿತು ಪಿಡಬ್ಲ್ಯೂಡಿಯವರಿಂದ ವರದಿ ಪಡೆದಿಲ್ಲ. ನಾನು ಸೋರ್ಸ್ ರಿಪೋರ್ಟ್ ಮಾಡುವಾಗ ಸ್ವಿಫ್ಟ್ ಕಾರನ್ನು ಯಾರು ಖರೀದಿ ಮಾಡಿದ್ದಾರೆ, ಯಾರು ಆ ಬಗ್ಗೆ ಹಣವನ್ನು ನೀಡಿದ್ದಾರೆ ಎಂಬ ಬಗ್ಗೆ ವಿವರವನ್ನು ಪಡೆದಿರುವುದಿಲ್ಲ. ಆರೋಪಿತನ ಮನೆಯ ಮೌಲ್ಯವನ್ನು ಹೆಚ್ಚು ತೋರಿಸಿ ಮತ್ತು ಆರೋಪಿತನಿಗೆ ಸಂಬಂಧವಿಲ್ಲದ ಸ್ವಿಫ್ಟ್ ಕಾರನ್ನು ಆರೋಪಿತನಿಗೆ ಸಂಬಂಧಿಸಿದ್ದೆಂದು, ಅಸ್ತಿಯ ಮೌಲ್ಯವನ್ನು ಹೆಚ್ಚು ತೋರಿಸುವ ಉದ್ದೇಶದಿಂದ, ತೋರಿಸಿದ್ದೇನೆ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಯ ವಿಸ್ತೀರ್ಣ ಎಷ್ಟು ಇತ್ತು ಮತ್ತು ಯಾವ ಅವಧಿಯಿಂದ ಯಾವ ಅವಧಿಯವರೆಗೆ ಆದಾಯದ ಮೌಲ್ಯಮಾಪನ ಮಾಡಲಾಗಿದೆ ಎಂದು ನಿಶಾನೆ ಪಿ.1 ರಲ್ಲಿ ಹೇಳಿಲ್ಲ ಎಂದರೆ ಅದರ ವಿಸ್ತೀರ್ಣ ಹೇಳಿಲ್ಲ ಎನ್ನುವುದು ನಿಜ, ಆದರೆ ಚೆಕ್ ಅವಧಿಯನ್ನು ಸದರಿ ಪಂಚನಾಮೆಯಲ್ಲಿ ಹೇಳಿದ್ದೇನೆ. ಆದಾಯದ ಮೌಲ್ಯಮಾಪನ ಮಾಡುವುದಕ್ಕೆ ಪೂರ್ವದಲ್ಲಿ ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯಿಂದ ವರದಿಯನ್ನು ಪಡೆದಿಲ್ಲ.

2.ಆರೋಪಿತನು ಪ್ರತಿವರ್ಷ ತಮ್ಮ ಆಸ್ತಿ ದಾಯತ್ವಪಟ್ಟಿಯಲ್ಲಿ ಯಾವ ಆಸ್ತಿಗಳ ವಿವರ ಘೋಷಣೆ ಮಾಡಿದ್ದಾನೆ ಎಂದು ತಿಳಿದುಕೊಂಡಿಲ್ಲ. ಆರೋಪಿತ ಆದಾಯ ತೆರಿಗೆ ಇಲಾಖೆಗೆ ಯಾವ ಆಸ್ತಿಗಳ ಆದಾಯದ ಘೋಷಣೆ ಮಾಡಿಕೊಂಡಿದ್ದರು ಎಂಬುದನ್ನು ಮಾಹಿತಿ ಸಂಗ್ರಹಣಾ ಕಾಲದಲ್ಲಿ ಪಡೆದಿಲ್ಲ. ಮಾಹಿತಿ ಸಂಗ್ರಹಣೆಯು ವ್ಯಕ್ತಿ ಆದಾಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಮಾಡಿದ್ದಾನೆಯೇ ಎಂದು ತಿಳಿಯಲು ಸಂಗ್ರಹಿಸುವ ಮಾಹಿತಿಯಾಗಿದೆ ಎನ್ನುವುದು ನಿಜ. ಮಾಹಿತಿ ಸಂಗ್ರಹಿಸಿದಾಗ ಆಸ್ತಿ ಖರ್ಚು ಮತ್ತು ಆದಾಯ ಸಮತೋಲನವಾಗಿದ್ದಾಗ ಅವರ ಮೇಲೆ ಪ್ರ.ವ.ವರದಿ ದಾಖಲಿಸುವುದಿಲ್ಲ ಎನ್ನುವುದು ನಿಜ. ಆರೋಪಿತರಿಗೆ ಸಂಬಂಧಿಸಿದ ಆದಾಯಗಳನ್ನು ನಿಖರವಾಗಿ ಪರಿಶೀಲಿಸಿದ್ದಲ್ಲಿ, ಈ ಪ್ರಕರಣವನ್ನು ದಾಖಲಿಸುವ ಪ್ರಮೇಯ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಮಾಹಿತಿ ಸಂಗ್ರಹಣೆ ಕಾಲದಲ್ಲಿ ಆರೋಪಿತನ ವಿರುದ್ಧ ಯಾವುದೇ ಅಸಮತೋಲನ ಆಸ್ತಿ ಇಲ್ಲದೇ ಇದ್ದರೂ ಸಹ ಉದ್ದೇಶಪೂರ್ವಕವಾಗಿ ಅವರ ವಿರುದ್ಧ ಪ್ರಕರಣ ದಾಖಲಿಸಲು ಸುಳ್ಳು ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

3.ಆರೋಪಿತನ ತಾಯಿಯ ಮನೆಯಲ್ಲಿ ಶೋಧನೆ ಮಾಡಿ ವರದಿ ಸಲ್ಲಿಸುವಾಗ ದೊರೆತ ಜಾನುವಾರುಗಳ ಆದಾಯವನ್ನು ಯಾರು ತೆಗೆದುಕೊಳ್ಳುತ್ತಾರೆ ಎಂದು ವಿಚಾರಿಸಿ ಪಂಚನಾಮೆಯಲ್ಲಿ ನಮೂದು ಮಾಡಿಲ್ಲ ಎಂದರೆ ನಿಜ. ಆರೋಪಿತನ ಮಾವನ ಮನೆಯಲ್ಲಿ

ಶೋಧನೆ ಮಾಡಿದಾಗ ಬಾಂಡ್ ಗಳ ಬಗ್ಗೆ ಹೂಡಿಕೆಯನ್ನು ಯಾರು ಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೇನೋ ಎಂದರೆ ತನಿಖಾಧಿಕಾರಿಯವರು ಮುಂದಿನ ತನಿಖೆಯನ್ನು ಮಾಡಿದ್ದಾರೆ.

**ಮರು ವಿಚಾರಣೆಃ** ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**
**ಸ್ಪೆಷಲ್ ನ್ಯಾಯಾಧೀಶರು, ಹಾಸನ.**